ಅಧ್ಯಕ್ಷರು.—ಈಗ ಕೌನ್ಸಿಲ್ ಕೂಡ ನಡೆಯುತ್ತಿದೆ. ಅಲ್ಲಿಯೂ ಮಂತ್ರಿಗಳು ಇರಬೇಕಾಗುತ್ತದೆ. ಇಲ್ಲಿಯೇ ಎಲ್ಲ ಮಂತ್ರಿಗಳು ಇರಬೇಕಾದುದು ಅನಾವಶ್ಯಕ. ಅವರು ಇಲ್ಲಿಯೂ ಇರುತ್ತಾರೆ, ಅಲ್ಲಿಯೂ ಇರುತ್ತಾರೆ. ಆದ್ದರಿಂದ ಎಲ್ಲ ಮಂತ್ರಿಗಳು ಇಲ್ಲಿಯೇ ಇರಬೇಕೆಂದು ಹೇಳುವುದು ಸಾಧ್ಯವಾಗುವುದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಈ ಶಾಸನಸಭೆಯ ಅಧಿವೇಶನವೂ ನಡೆಯುತ್ತಿದೆ, ಮೇಲ್ಮನೆಯ ಅಧಿವೇಶನವೂ ನಡೆಯುತ್ತಿದೆ. ಅಲ್ಲಿಗೂ ಮಂತ್ರಿಗಳು ಹೋಗಬೇಕಾಗುತ್ತದೆ. ಅದು ನಮಗೆ ಗೊತ್ತಿದೆ. ಮಾನ್ಯ ಸದಸ್ಯರಾದ ಅರ್ಮುಗಂ ಅವರು ಎತ್ತಿರುವ ವಿಷಯ ಶಾಸನಸಭಾ ಅಧಿವೇಶನ ನಡೆಯುತ್ತಿದ್ದ ಕಾಲದಲ್ಲಿ ಮಂತ್ರಿಗಳು ಪ್ರವಾಸ ಮಾಡಬಾರದು ಎಂಬುದು. ಅದು ಅತಿ ಮುಖ್ಯವಾದುದು ಈ ರೀತಿ ಪ್ರವಾಸ ಹೋಗಬಾರದೆಂದು ಹಿಂದಿನ ಅಧ್ಯಕ್ಷರು ಸಹ ಅನೇಕ ಸಲ ಹೇಳಿದ್ದಾರೆ. ಆದರೂ ಹೋಗುತ್ತಿದ್ದಾರೆ. ಸರ್ಕಾರದ ವತಿಯಿಂದ ಏನಾದರು ಉತ್ತರವನ್ನು ಶಾಸಕರು ಕೇಳಿದಾಗ ಆ ಸಮಯದಲ್ಲಿ ಸಂಬಂಧಪಟ್ಟ ಮಂತ್ರಿಗಳು ಇಲ್ಲದಿದ್ದರೆ ಇನ್-ಚಾರ್ಜ್ ಮಂತ್ರಿಗಳು ಕೂಡಲೇ ಆ ಉತ್ತರವನ್ನು ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಈ ದೃಷ್ಟಿಯಿಂದ ಎಮರ್ಜೆನ್ಸಿ ಇದ್ದರೆ ಹೊರತು ಉಳಿದಂತೆ ಶಾಸನಸಭೆ ನಡೆಯುತ್ತಿರುವಾಗ ಯಾವ ಮಂತ್ರಿಗಳೂ ಪ್ರವಾಸ ಮಾಡಬಾರದೆಂದು ತಾವು ಆದೇಶ ಕೊಟ್ಟರೆ ಒಳ್ಳೆಯದು. ಶಾಸನಸಭೆಯ ಹಿತದೃಷ್ಟಿಯಿಂದ ಮಂತ್ರಿಗಳು ಮಾದುವೆ ಸಮಾರಂಭಕ್ಕೆ, ಅಡಿಗಲ್ಲು ಹಾಕುವ ಸಮಾರಂಭಕ್ಕೆ, ಸತ್ಕಾರ ಕೂಟಗಳಿಗೆ ಹೋಗುವುದು ಸರಿಯಲ್ಲ, ಅದಕ್ಕೆ ಜೀರೋ ಹಾಕಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಅದರ ಬಗ್ಗೆ ಮಾನ್ಯ ಚನ್ನಬಸಪ್ಪನವರು ಹೇಳಿದ್ದಾರೆ. ಸರ್ಕಾರೀ ಕಾರ್ಯಕ್ರಮಕ್ಕೆ ಮೊದಲ ಆದ್ಯತೆ ಕೊಡುತ್ತೇವೆಂದು ಹೇಳಿದ್ದಾರೆ. ನಾವು ನಿರೀಕ್ಷೆ ಮಾಡಿ ನೋಡೋಣ.

ಶ್ರೀ ಎಚ್. ಡಿ. ದೇವೇಗೌಡ.—ನೆನ್ನೆದಿವಸ ಮಾರ್ಗದ ಮಲ್ಲಪ್ಪನವರು ಒಂದು ನೋಟೀಸ್ ಕೊಟ್ಟಿದ್ದಾರೆ. ಆ ಸಂಬಂಧದಲ್ಲಿ ತಮ್ಮ ಒಂದು ತೀರ್ಪನ್ನು ಕಾದಿರಿಸಿದ್ದೀರಿ. ಈ ಒಂದು ಸಮಸ್ಯೆಯನ್ನು ಬಗೆಹರಿಸತಕ್ಕಂಥ ಸನ್ನಿವೇಶದಲ್ಲಿ ಉಭಯತ್ರರಲ್ಲಿ ಒಂದು ಒಳ್ಳೆಯ ಸೌಹಾರ್ದ ವಾತಾವರಣ ಮೂಡಿಸ ಬೇಕಾಗಿರುವುದರಿಂದ ಅದಕ್ಕೆ ಸ್ವಲ್ಪ ಕಾಲಾವಕಾಶ ಮಾಡಿಕೊಡಬೇಕು. ಮತ್ತು ಇದರ ಬಗ್ಗೆ ತಮ್ಮ ರೂಲಿಂಗನ್ನು ನಾಳೆಯವರೆಗೆ ಮುಂದೂಡಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು.—ತಾವು ಏನಾದರು ಹೇಳುವುದು ಇದೆಯೇ?

ಶ್ರಿ ಎಚ್. ಎಂ. ಚೆನ್ನಬಸಪ್ಪ.—ವಿರೋಧಪಕ್ಷದ ನಾಯಕರು ಈ ವಿಷಯದ ಬಗ್ಗೆ ಒಂದು ವ್ಯವಸ್ಥೆ ಮಾಡುವುದಕ್ಕೆ ಮತ್ತು ಸೌಹಾರ್ದ ವಾತಾವರಣವನ್ನು ಕಲ್ಪನೆ ಮಾಡುವುದಕ್ಕೆ ಕಾಲಾವಕಾಶ ಬೇಕು ಎಂದು ಕೇಳುವಾಗ, ಬೇಡ ಎಂದು ಹೇಳುವುದು ನಮ್ಮ ಪಾರ್ಟಿಯ ಪರವಾಗಿಯಾಗಲೀ ನಮ್ಮ ಸರ್ಕಾರದ ಪರವಾಗಿಯಾಗಲೀ ಸರಿಯಲ್ಲ. ತಮಗೆ ಸೂಕ್ತ ತೋರಿದಂತೆ ಮಾಡಬಹುದು.

MADAM SPEAKER.—I will give my Ruling tomorrow.

Sri C. M. ARUMUGHAM.—We appreciate the fairness of the Deputy Leader of the House.

Presentation of Petition

re: Grievances of Village officers in Khanapur Taluk

Sri N. B. SIRDESAI (Khanapur).—I present a petition signed by the Chairman of Patils and others of Khanapur Taluk regarding the grievances of both the superior and inferior village officers.

MADAM SPEAKER.—Petition presented.